ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 21-08-2021 ರಂದು ನಡೆದ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಆಗಸ್ಟ್-2021 ರ ಮಾಹೆಯ ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 21-08-2021 ರಂದು ನೆಡೆಸಲಾಯಿತು.

### ಸಭೆಗೆ ಹಾಜರಿದ್ದವರ ವಿವರಗಳು

| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ. ಆರ್. ಶಿವಕುಮಾರ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ಡಿ. ಮೂರ್ತಿ | ಸದಸ್ಯ ಕಾರ್ಯದರ್ಶಿ ಮತ್ತು<br>ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 115 |
| 3 | ಶ್ರೀ. ಸ್ವಾಮಿ | ಕಂದಾಯ ಪರಿವೀಕ್ಷಕರು, ವಾಡ್ ಸಂಖ್ಯೆ: 115<br>ವನ್ನಾರಪೇಟೆ, ಬಿಬಿಎಂಪಿ |
| 4 | ಶ್ರೀ. ಮಂಜುನಾಥ್ ಮತ್ತು ಶ್ರೀ. ಪಂಚುಸ್ವಾಮಿ | ಕೆಲಸ ಪರಿವೀಕ್ಷಕರು,ಬಿ.ಡಬ್ಲ್ಯು.ಎಸ್.ಎಸ್.ಬಿ |
| 5 | ಮಂಜುನಾಥ | ಕಂದಾಯ ವಸೂಲಿಗಾರರು, ವಾರ್ಡ್ ನಂ. 115, ಬಿಬಿಎಂಪಿ |
| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ | | |
| 6 | ಥಾಮ | ವಾರ್ಡ್ ಸಮಿತಿ ಸದಸ್ಯರು |
| 7 | ವಿ. ಆರ್. ಜಯ್ ಕುಮಾರ್ | ವಾರ್ಡ್ ಸಮಿತಿ ಸದಸ್ಯರು |
| 8 | ಮುಸ್ತಫಾ | ವಾರ್ಡ್ ಸಮಿತಿ ಸದಸ್ಯರು |
| 9 | ಸುಬ್ರಮಣಿ | ವಾರ್ಡ್ ಸಮಿತಿ ಸದಸ್ಯರು<br>(ಮಡಿವಾಳ ಮಾಚಿದೇವ ಅಸೋಸಿಯೇಷನ್) |

ದಿನಾಂಕ: 21-08-2021 ರಂದು ಪೂರ್ವಾಹ್ನ 11-00 ಗಂಟೆಗೆ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಡಿ. ಮೂರ್ತಿ, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ವಾರ್ಡ್ ಸಮಿತಿ ಅಧ್ಯಕ್ಷರು & ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

- **ಇಂದಿನ ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

| ಕ್ರ. ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಳ್ಳಬೇಕಾದ ಕ್ರಮ | ಕ್ರಮಕೈಗೊಳ್ಳಬೇಕಾದ ಅಧಿಕಾರಿಗಳ ವಿವರ |
|---|---|---|---|
| 1 | ಶ್ರೀ. ಮುಸ್ತಫಾ, ವಾರ್ಡ್ ಕಮಿಟಿ ಸದಸ್ಯರು ರವರು ಮನವಿ ಸಲ್ಲಿಸಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಿರುವುದಿಲ್ಲ ಎಂದು ತಿಳಿಸಿರುತ್ತಾರೆ. | ಈ ಕುರಿತು ಮುಂದಿನ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ತಿಳಿಸಲಾಗುವುದು. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| 2 | ಡಿ. ಥಾಮ ರವರು ವಾರ್ಡ್ ಕಮಿಟಿ ಸದಸ್ಯರು ಮನವಿ ಸಲ್ಲಿಸಿ ವನ್ನಾರಪೇಟೆ ವ್ಯಾಪ್ತಿಯ ಕೆಲವೊಂದು ರಸ್ತೆಗಳಲ್ಲಿ ಪೌರಕಾರ್ಮಿಕರು ರಸ್ತೆಯನ್ನು ಸ್ವಚ್ಛತೆ ಮಾಡದೇ ಇರುವುದರಿಂದ ರಸ್ತೆಗಳಲ್ಲಿ ಘನತ್ಯಾಜ್ಯ ಹಾಗೆಯೇ ಬಿದ್ದಿರುವುದರಿಂದ ಅದನ್ನು ತೆರವುಗೊಳಿಸಲು ಕೋರಿರುತ್ತಾರೆ. | ಈ ಕುರಿತು ಅಗತ್ಯ ಕ್ರಮವಹಿಸುವಂತೆ, ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ. | ಶ್ರೀ. ಅಪ್ಪರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಬಿ.ಎಂ.ಪಿ ಘನತ್ಯಾಜ್ಯ ನಿರ್ವಹಣೆ ವಿಭಾಗ, ಶಾಂತಿನಗರ |
| 3 | ಶ್ರೀ. ಸುಬ್ರಮಣಿ, ವಾರ್ಡ್ ಕಮಿಟಿ ಸದಸ್ಯರು ರವರು ಮನವಿ ಸಲ್ಲಿಸಿ ವನ್ನಾರಪೇಟೆ ವ್ಯಾಪ್ತಿಯ ಪ್ರತಿಯೊಂದು ರಸ್ತೆಯಲ್ಲಿ ಫಾಗಿಂಗ್ ಮಾಡಲು ಕೋರಿರುತ್ತಾರೆ. | ಈ ಕುರಿತು ಅಗತ್ಯ ಕ್ರಮವಹಿಸುವಂತೆ ಸಭೆಯಲ್ಲಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು. | ಶ್ರೀ. ಸಗಾಯನಾಥನ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.115 |
| 4 | ಶ್ರೀ. ವಿ. ಆರ್. ಜಯ್ ಕುಮಾರ್, ವಾರ್ಡ್ ಕಮಿಟಿ ಸದಸ್ಯರು ರವರು ಮನವಿ ಸಲ್ಲಿಸಿ ವನ್ನಾರಪೇಟೆ ವ್ಯಾಪ್ತಿಯ ನಾರ್ತ್ ಸ್ಟ್ರೀಟ್, ಮೆಕ್ಕಾ ಮಸೀದಿ ರಸ್ತೆ ಇಲ್ಲಿ ಚರಂಡಿಯಲ್ಲಿನ ಹೂಳನ್ನು ತೆಗೆಯಲು ಕೋರಿರುತ್ತಾರೆ. | ಸಭೆಯಲ್ಲಿದ್ದ ಶ್ರೀ ಮೂರ್ತಿ, ಸಹಾಯಕ ಇಂಜನಿಯರ್ ರವರಿಗೆ ಕೂಡಲೇ ಕ್ರಮವಹಿಸುವಂತೆ ಸೂಚಿಸಿರುತ್ತಾರೆ | ಶ್ರೀ. ಟಿ.ಡಿ. ಮಂಜುನಾಥ, ಸ.ಕಾ.ನಿ.ಅ ದೊಮ್ಮಲೂರು ಉಪವಿಭಾಗ, ಬಿ.ಬಿ.ಎಂ.ಪಿ |
| 5 | ಶ್ರೀ. ಮುಸ್ತಫಾ, ವಾರ್ಡ್ ಕಮಿಟಿ ಸದಸ್ಯರು ರವರು ಮನವಿ ಸಲ್ಲಿಸಿ ವಿವೇಕನಗರ ವ್ಯಾಪ್ತಿಯ ಕೆಲವೊಂದು ರಸ್ತೆಗಳಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಇದನ್ನು ತೆರವುಗೊಳಿಸಲು ಹಾಗೂ ಕೆ.ಬಿ.ಎ.ಆರ್ ರಸ್ತೆಯಲ್ಲಿ ತಳ್ಳುವ ಗಾಡಿಗಳಲ್ಲಿ ತರಕಾರಿ ಹಾಗೂ ಹಣ್ಣುಹಂಪಲು ಮಾರುತ್ತಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುತ್ತದೆ. ಇದನ್ನು ತೆರವುಗೊಳಿಸಲು ಕೋರಿರುತ್ತಾರೆ. | ಈ ಕುರಿತು ಸ್ಥಳ ಪರಿಶೀಲಿಸಿ ಕ್ರಮವಹಿಸುವಂತೆ ಆರೋಗ್ಯ ಅಧಿಕಾರಿಗಳು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿರುತ್ತಾರೆ. | ಶ್ರೀ. ಶ್ರೀನಿವಾಸ್, ಆರೋಗ್ಯ ಅಧಿಕಾರಿಗಳು, ಬಿ.ಬಿ.ಎಂ.ಪಿ,<br>ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ದೊಮ್ಮಲೂರು ಉಪವಿಭಾಗ, ಬಿಬಿಎಂಪಿ,<br>ಹಾಗೂ<br>ಪೋಲೀಸ್ ಇನ್ಸ್‌ಪೆಕ್ಟರ್ (ಸಂಚಾರ), ಅಶೋಕನಗರ ಪೋಲೀಸ್ ಠಾಣೆ |
| 6 | ಶ್ರೀ. ಡಿ. ಥಾಮ, ವಾರ್ಡ್ ಕಮಿಟಿ ಸದಸ್ಯರು ರವರು ಮನವಿ ಸಲ್ಲಿಸಿ ವನ್ನಾರಪೇಟೆ ವ್ಯಾಪ್ತಿಯಲ್ಲಿ ನೀರು ಸರಿಯಾಗಿ ಬರುತ್ತಿರುವುದಿಲ್ಲ. ಇದರ ಬಗ್ಗೆ ಕ್ರಮಕೈಗೊಳ್ಳಲು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು ಈ ಕುರಿತು ಅಗತ್ಯ ಕ್ರಮವಹಿಸುವಂತೆ ಶ್ರೀ. ಮಂಜುನಾಥ್ ಮತ್ತು ಶ್ರೀ. ಪಂಜುಕುಮಾರ್, ಕೆಲಸ ಪರಿವೀಕ್ಷಕರು ರವರು ಸೂಚನೆ ನೀಡಿರುತ್ತಾರೆ. | ಶ್ರೀ. ಶ್ರೀನಿವಾಸ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| 7 | ಶ್ರೀ. ವಿ. ಆರ್. ಜಯ್ ಕುಮಾರ್, ವಾರ್ಡ್ ಕಮಿಟಿ ಸದಸ್ಯರು ರವರು ಮನವಿ ಸಲ್ಲಿಸಿ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಹಾಗೂ ಕೆಲವೊಂದು ರಸ್ತೆಗಳಲ್ಲಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಿರುವುದಿಲ್ಲ. ಇದರ ಬಗ್ಗೆ ಕ್ರಮಕೈಗೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು ಈ ಕುರಿತು ಅಗತ್ಯ ಕ್ರಮವಹಿಸುವಂತೆ ಬೆಸ್ಕಾಂ ರವರಿಗೆ ಕೂಡಲೇ ಕ್ರಮವಹಿಸುವಂತೆ ಸೂಚನೆ ನೀಡಿರುತ್ತಾರೆ. | ಶ್ರೀ. ಮಂಜಪ್ಪ<br>ಹಿರಿಯ ಅಭಿಯಂತರರು<br>ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |
| 8 | ವಾರ್ಡ್ ಸಮಿತಿ ಸದಸ್ಯರುಗಳೆಲ್ಲರೂ ವನ್ನಾರಪೇಟೆ | ನೋಡಲ್ ಅಧಿಕಾರಿಗಳು ಈ ಕುರಿತು | ಪೋಲೀಸ್ ಇನ್ಸ್‌ಪೆಕ್ಟರ್ |

| | | | |
|---|---|---|---|
| | ವ್ಯಾಪ್ತಿಯಲ್ಲಿ ಪೋಲೀಸ್ ರವರು ರಾತ್ರಿ ಗಸ್ತನ್ನು ಹೆಚ್ಚಿಸಿದಲ್ಲಿ ರಾತ್ರಿ ಸಮಯದಲ್ಲಿ ಪೋಲಿ ಪುಂಡರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಮನವಿ ಮಾಡಿರುತ್ತಾರೆ. | ಅಗತ್ಯ ಕ್ರಮವಹಿಸುವಂತೆ ಸಭೆಯಲ್ಲಿದ್ದ ಪೋಲೀಸ್ ಅಧಿಕಾರಿಗಳಿಗೆ ಸೂಚಿಸಿದರು. | ವಿವೇಕನಗರ ಪೋಲೀಸ್ ಠಾಣೆ |

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**
**ಬಿ.ಬಿ.ಎಂ.ಪಿ**

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ), ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಪೂರ್ವ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ), ಬಿ.ಬಿ.ಎಂ.ಪಿ ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.